| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 56 ] [ Total No. of Printed Pages : 24

ಸಂಕೇತ ಸಂಖ್ಯೆ : **85-K** **ವಿಷಯ : ಸಮಾಜ ವಿಜ್ಞಾನ**

**Code No. : 85-K** **Subject : SOCIAL SCIENCE**

( ಕನ್ನಡ ಭಾಷಾಂತರ )

( Kannada Version )

ದಿನಾಂಕ : 10. 04. 2013 ] [ Date : 10. 04. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ದೇಶದ ಉದ್ದಗಲಕ್ಕೆ ಸರ್ವಋತು ರಾಜಮಾರ್ಗಗಳನ್ನು ನಿರ್ಮಿಸುವ ಯೋಜನೆ ಹಾಕಿದ ಗವರ್ನರ್ ಜನರಲ್

   (A) ಲಾರ್ಡ್ ಡಾಲ್‌ಹೌಸಿ

   (B) ಲಾರ್ಡ್ ವಿಲಿಯಂ ಬೆಂಟಿಂಕ್

   (C) ಲಾರ್ಡ್ ಕಾರ್ನ್‌ವಾಲೀಸ್

   (D) ಲಾರ್ಡ್ ವೆಲ್ಲೆಸ್ಲಿ

   *ಉತ್ತರ :* ____________________

2. ಬ್ರಿಟಿಷ್ ವಿರೋಧಿ ಲೇಖನಗಳಿಗಾಗಿ ಬಂಧಿತರಾದ ಬಿಜಾಪುರದ ಪತ್ರಿಕೋದ್ಯಮಿ

(A) ಜಯರಾವ್ ನರಗುಂದ

(B) ಆರ್.ಆರ್. ದಿವಾಕರ

(C) ಹನುಮಂತರಾವ್ ಮೊಹರೆ

(D) ಕೆ.ಸಿ. ರೆಡ್ಡಿ

*ಉತ್ತರ :* ______________________

3. ಒರಿಸ್ಸಾದಲ್ಲಿ ನೆಲೆನಿಂತ ಪೂರ್ವ ಪಾಕಿಸ್ತಾನದ ನಿರಾಶ್ರಿತರಿಗೆ ಪುನರ್‌ವಸತಿಗಾಗಿ ಕೈಗೊಂಡ ಯೋಜನೆ

(A) ಹಿರಾಕುಡ್ ಯೋಜನೆ

(B) ಗಂಗಾ ಕಾವೇರಿ ಯೋಜನೆ

(C) ದಂಡಕಾರಣ್ಯ ಯೋಜನೆ

(D) ಮುಂಡಗೋಡ ಮತ್ತು ಬೈಲುಕುಪ್ಪೆ ಯೋಜನೆ

*ಉತ್ತರ :* ______________________

4. ಅಲಿಪ್ತ ರಾಷ್ಟ್ರಗಳ ಚಳುವಳಿ ನಾಯಕರ ಸರಿಯಾದ ಗುಂಪು

(A) ಸುಕಾರ್ನೋ, ಮುಸ್ಸೊಲಿನಿ, ನೆಹರು, ನಾಸೆರ್

(B) ನೆಹರು, ಗಾಂಧೀಜಿ, ನಾಸೆರ್, ಟಿಟೋ

(C) ಸುಕಾರ್ನೋ, ನಾಸೆರ್, ಟಿಟೋ, ನೆಹರು

(D) ಟಿಟೋ, ನಾಸೆರ್, ನೆಹರು, ಹಿಟ್ಲರ್

*ಉತ್ತರ :* ______________________

5. ನೂತನ ಯೋಜನೆಯನ್ನು ಜಾರಿಗೆ ತಂದ ಪರಿಣಾಮ

(A) ಅಮೆರಿಕಾ ಪುನಃ ಒಂದು ಆರ್ಥಿಕ ಶಕ್ತಿಯಾಗಿ ಬೆಳೆಯಿತು

(B) ಅಮೆರಿಕಾ ಮತ್ತು ಚೀನಾ ನಡುವೆ ಸ್ನೇಹ ಸುಧಾರಿಸಿತು

(C) ಅಮೆರಿಕಾವು ಎರಡನೇ ಮಹಾಯುದ್ಧದಲ್ಲಿ ಪ್ರವೇಶಿಸಿತು

(D) ಅಮೆರಿಕಾ ಪರ್ಲ್ ಹಾರ್ಬರ್ ಮೇಲಿನ ಹಿಡಿತವನ್ನು ಕಳೆದುಕೊಂಡಿತು

*ಉತ್ತರ :* ______________________________

6. ಹಿಟ್ಲರ್ ಜರ್ಮನಿಗೆ ಸೇರಿದರೆ, ಮುಸ್ಸೊಲಿನಿ ಸೇರಿದ್ದು

(A) ಅಮೆರಿಕಾಕ್ಕೆ

(B) ರಷ್ಯಾಕ್ಕೆ

(C) ಇಟಲಿಗೆ

(D) ಚೀನಾಕ್ಕೆ

*ಉತ್ತರ :* ______________________________

7. ಮಹಿಳಾ ಸಬಲೀಕರಣವೆಂದು ಸಾರಿದ ವರ್ಷ

(A) 2001

(B) 2010

(C) 1999

(D) 2004

*ಉತ್ತರ :* ______________________________

8. ತನ್ನ ಪ್ರದೇಶ ಅಥವಾ ಪ್ರಾಂತ್ಯದ ಕಾಳಜಿ ಕುರಿತು ವ್ಯಕ್ತಿಗಿರುವ ತೀವ್ರವಾದ ನಿಷ್ಠೆ ಮತ್ತು ಸಂಕುಚಿತ ಭಾವನೆ

(A) ಕೋಮುವಾದ

(B) ಪ್ರಾಂತೀಯತೆ

(C) ಭಾಷೀಯತೆ

(D) ಜಾತೀಯತೆ

*ಉತ್ತರ :* ____________________

9. ಭಾರತದಲ್ಲಿ ಆಶ್ರಯಪಡೆದ ಟಿಬೆಟಿನ ಧರ್ಮಗುರು

(A) ಚೌಎನ್ ಲಾಯ್

(B) ಮಾವೋ ತ್ಸೆ-ತುಂಗ್

(C) ದಲಾಯಿ ಲಾಮ

(D) ಸನ್‌ಯಾತ್ ಸೆನ್

*ಉತ್ತರ :* ____________________

10. ಏಪ್ರಿಲ್‌ನ ಮಳೆಯನ್ನು 'ಮಾವಿನ ಹೊಯ್ಲು' ಎಂಬ ಹೆಸರಿನಿಂದ ಇಲ್ಲಿ ಕರೆಯುತ್ತಾರೆ

(A) ಕರ್ನಾಟಕ

(B) ಆಂಧ್ರ ಪ್ರದೇಶ

(C) ತಮಿಳುನಾಡು

(D) ಕೇರಳ

*ಉತ್ತರ :* ____________________

11. ಮಹಾಗನಿ : ನಿತ್ಯಹರಿದ್ವರ್ಣ ಸಸ್ಯವರ್ಗ :: ಖರ್ಜೂರ ಮತ್ತು ತಾಳೆ ಮರಗಳು : ........................ .

(A) ಮ್ಯಾಂಗ್ರೋವ್ ಸಸ್ಯವರ್ಗ

(B) ಉಷ್ಣವಲಯದ ಎಲೆ ಉದುರುವ ಸಸ್ಯವರ್ಗ

(C) ಹಿಮಾಲಯದ ಸಸ್ಯವರ್ಗ

(D) ಮರಳುಗಾಡಿನ ಸಸ್ಯವರ್ಗ

*ಉತ್ತರ :* ______________________________

12. ಭಾರತವು ಸೌರಶಕ್ತಿಯ ಉತ್ಪಾದನೆಗೆ ಪ್ರಮುಖ ಸ್ಥಾನವನ್ನು ಕೊಟ್ಟಿದೆ. ಏಕೆಂದರೆ

(A) ಸೌರಶಕ್ತಿಯನ್ನು ಉಪಯೋಗಿಸಿಕೊಳ್ಳಲು ಸನ್ನಿವೇಶವು ಅನುಕೂಲಕರವಾಗಿದೆ

(B) ಇದು ಅಸ್ಥಿರವಾದ ಸಂಪನ್ಮೂಲ

(C) ಇದು ಮುಗಿದುಹೋಗುವ ಶಕ್ತಿ ಸಂಪನ್ಮೂಲವಾಗಿದೆ

(D) ಇದನ್ನು ಕೆಲವೇ ಉದ್ದೇಶಗಳಿಗೆ ಬಳಸಬಹುದಾಗಿದೆ

*ಉತ್ತರ :* ______________________________

13. ಭಾರತದ ರ್‍ಹೂರ್ ಎಂದರೆ

(A) ಛೋಟಾನಾಗಪುರ ಪ್ರಸ್ಥಭೂಮಿ

(B) ಗೋರಖ್‌ಪುರ

(C) ಮುಂಬೈ

(D) ಉತ್ತರ ಭಾರತದ ಮೈದಾನ

*ಉತ್ತರ :* ______________________________

14. ಸರಕುಗಳನ್ನು ನೇರವಾಗಿ ಸರಕುಗಳಿಗೆ ವಿನಿಮಯ ಮಾಡುವ ಪದ್ಧತಿಯನ್ನು ..................... ಎನ್ನುತ್ತೇವೆ.

(A) ಪುನರ್‌ರಫ್ತು

(B) ಆಮದು

(C) ರಫ್ತು

(D) ವಸ್ತುವಿನಿಮಯ

*ಉತ್ತರ :* ______________________________

15. ರೈತರ ಸಮಸ್ಯೆಗಳನ್ನು ಬಗೆಹರಿಸಲು ಪ್ರತಿ ಹೋಬಳಿಯಲ್ಲೂ ಕರ್ನಾಟಕ ಸರ್ಕಾರ ರೂಪಿಸಿದ ಯೋಜನೆ

(A) ಕೂಲಿಗಾಗಿ ಕಾಳು

(B) ರೈತಮಿತ್ರ

(C) ಇಪ್ಪತ್ತು ಅಂಶಗಳ ಕಾರ್ಯಕ್ರಮ

(D) ಹಿಡುವಳಿಯ ಪರಮಾವಧಿಗಳ ಮಿತಿ

*ಉತ್ತರ :* ______________________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಮೂರನೇ ಕರ್ನಾಟಕ ಯುದ್ಧದಲ್ಲಿ ಫ್ರೆಂಚ್‌ರ ಗವರ್ನರ್ ಆಗಿದ್ದವರು ..........................................

17. ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ನೇಮಕರಾದವರು ..................................................

18. ವರ್ಣಭೇದ ನೀತಿಯನ್ನು ಮೊದಲಬಾರಿಗೆ ಪ್ರಬಲವಾಗಿ ಖಂಡಿಸಿದವರು ..........................................

19. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲೆಯನ್ನು ಹೊಂದಿರುವ ಪ್ರದೇಶ ......................................

20. ಗ್ರಾಮೀಣ ಜನರು ಹೆಚ್ಚಾಗಿ ತಮ್ಮನ್ನು ತಾವು ಈ ಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ......................

..........................................................................................................

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : $5 \times 1 = 5$

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| a) | ಸರ್ವೋಚ್ಚ ನ್ಯಾಯಾಲಯ | i) | ಮಿಂಟೋ–ಮಾರ್ಲೆ ಸುಧಾರಣೆ |
| b) | ಮತೀಯ ಆಧಾರದ ಮೇಲೆ ಪ್ರತ್ಯೇಕ ಚುನಾವಣಾ ಕ್ಷೇತ್ರ | ii) | ದಯಾನಂದ ಸರಸ್ವತಿ |
| c) | ಡಿ.ಎ.ವಿ. ಶಾಲೆಗಳು | iii) | ಆ್ಯನಿಬೆಸೆಂಟ್ |
| d) | ಸ್ತ್ರೀಪುರುಷ ತುಲನ | iv) | ರೆಗ್ಯುಲೇಟಿಂಗ್ ಶಾಸನ |
| e) | ಕೇಂದ್ರೀಯ ಹಿಂದೂ ಕಾಲೇಜು | v) | ತಾರಾಬಾಯಿ ಶಿಂಧೆ |
| | | vi) | ಕರ್ನಲ್ ಆಲ್ಕಾಟ್ |
| | | vii) | ರಾಜಾ ರಾಮಮೋಹನ್ ರಾಯ್ |
| | | viii) | ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ್ ಸುಧಾರಣೆ |

*ಉತ್ತರಗಳು :* a) ________________

b) ________________

c) ________________

d) ________________

e) ________________

IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು ಯಾರು ?

23. ಅಮೆರಿಕಾವು ಮೊದಲನೇ ವಿಶ್ವಯುದ್ಧದಲ್ಲಿ ಏಕೆ ಪ್ರವೇಶಿಸಿತು ?

24. ಸರ್ಕಾರವು ಲೋಕಾಯುಕ್ತ ಸಂಸ್ಥೆಯನ್ನು ಏಕೆ ಸ್ಥಾಪಿಸಿದೆ ?

25. ಸಾರ್ಕ್ ಸಂಸ್ಥೆಯ ಆಡಳಿತ ಕಛೇರಿ ಎಲ್ಲಿದೆ ?

26. 'ವೀಟೋ' ಅಧಿಕಾರ ಎಂದರೇನು ?

27. ಮ್ಯಾಂಗ್ರೋವ್ ಅರಣ್ಯಗಳ ವಿಶೇಷ ಲಕ್ಷಣಗಳೇನು ?

28. ಕೊಳವೆ ಮಾರ್ಗಗಳಲ್ಲಿ ಮುಖ್ಯವಾಗಿ ಯಾವ ವಸ್ತುಗಳ ಸಾಗಾಟ ನಡೆಯುತ್ತದೆ ?

29. ಸುಖೀ ರಾಜ್ಯ ಎಂದರೇನು ?

30. ವಿಶ್ವಸಂಸ್ಥೆಯನ್ನು ಸ್ಥಾಪಿಸಲು ಕಾರಣವೇನು ?

V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. ದೊಡ್ಡ ದೇವರಾಜ ಒಡೆಯರ ಸಾಧನೆಗಳೇನು ?

32. ಎರಡನೇ ಆಂಗ್ಲೊ-ಸಿಖ್ ಯುದ್ಧಕ್ಕೆ ಕಾರಣಗಳೇನು ?

33. ಭಾರತೀಯರಲ್ಲಿ ರಾಷ್ಟ್ರೀಯ ಮನೋಭಾವನೆ ಬೆಳೆಸುವುದರ ಜೊತೆಗೆ ಜಾಗೃತಿ ಮೂಡಿಸುವಲ್ಲಿ ವೃತ್ತಪತ್ರಿಕೆಗಳು ಹೇಗೆ ಸಹಾಯಕವಾಯಿತು ?

34. ಮೈಸೂರು ರಾಜ್ಯ ಕಾಂಗ್ರೆಸ್ ಮೈಸೂರು ಚಲೋ ಚಳುವಳಿಯನ್ನು ನಡೆಸಲು ಏಕೆ ನಿರ್ಧರಿಸಿತು ?

35. ಜುನಾಗಢ ಸಂಸ್ಥಾನ ಭಾರತದ ಒಕ್ಕೂಟಕ್ಕೆ ಹೇಗೆ ವಿಲೀನಗೊಂಡಿತು ?

36. ಆಸ್ಟ್ರಿಯಾವು ಸರ್ಬಿಯಾದ ಮೇಲೆ 1914 ರಲ್ಲಿ ಏಕೆ ದಾಳಿ ಮಾಡಿತು ?

37. ಬರ್ಮಾ ದೇಶವು ಸ್ವಾತಂತ್ರ್ಯವಾದದ್ದು ಹೇಗೆ ?

38. ಕೋಮುವಾದವನ್ನು ತಡೆಗಟ್ಟಲು ಸರ್ಕಾರ ಹೇಗೆ ಶ್ರಮಿಸುತ್ತಿದೆ ?

39. ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಪ್ರಮುಖ ಅಂಗ ಎಂದು ಏಕೆ ಪರಿಗಣಿಸಲಾಗಿದೆ ?

40. ಈ ಹಿಂದೆ ಭಾರತವು ಅಣ್ವಸ್ತ್ರ ತಗ್ಗಿಸುವ ಒಪ್ಪಂದಕ್ಕೆ ಸಹಿ ಹಾಕದಿರಲು ಕಾರಣವೇನು ?

41. ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಹೊಂದಿದೆ. ವಿವರಿಸಿ.

42. ಅಭ್ರಕಕ್ಕೆ ಪ್ರಪಂಚದಲ್ಲಿ ಹೆಚ್ಚಿನ ಬೇಡಿಕೆ ಇದೆ. ಏಕೆ ?

43. ಸೆಣಬಿನ ಕಾರ್ಖಾನೆಗಳು ಹೆಚ್ಚಾಗಿ ಪಶ್ಚಿಮ ಬಂಗಾಳದಲ್ಲಿ ಸ್ಥಾಪಿತವಾಗಲು ಕಾರಣವೇನು ?

44. ಭಾರತಕ್ಕೆ ರಸ್ತೆಗಳ ಉಪಯೋಗಗಳೇನು ?

45. ಸರ್ಕಾರವು ಗುಡಿ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಅನುಕೂಲಕರವಾದ ನೀತಿಯನ್ನು ಹೇಗೆ ಅನುಸರಿಸುತ್ತಿದೆ ?

46. ಮೂರನೇ ಪಂಚವಾರ್ಷಿಕ ಯೋಜನೆ ವಿಫಲವಾಗಲು ಕಾರಣಗಳೇನು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಪೋರ್ಚುಗೀಸರು ಭಾರತದಲ್ಲಿ ತಮ್ಮ ಅಧಿಕಾರ ಸ್ಥಾಪಿಸಲು ಹೇಗೆ ಪ್ರಯತ್ನಿಸಿದರು ?

48. 1857 ರ ದಂಗೆಗೆ ಆಡಳಿತಾತ್ಮಕ ಮತ್ತು ಸಾಮಾಜಿಕ ಧಾರ್ಮಿಕ ಕಾರಣಗಳೇನು ?

49. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಸರ್ಕಾರವು ಹೇಗೆ ಶ್ರಮಿಸುತ್ತಿದೆ ?

50. ದೇಶದ ಆರ್ಥಿಕ ಅಭಿವೃದ್ಧಿಗೆ ಮಾನವ ಸಂಪನ್ಮೂಲವು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

51. ಕಾಫಿ ಮತ್ತು ಚಹಾ ಬೆಳೆಗೆ ಬೇಕಾಗುವ ಭೌಗೋಳಿಕ ಅಂಶಗಳನ್ನು ತಿಳಿಸಿ.

52. ಭಾರತವು ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸಿದಂದಿನಿಂದಲೂ ಪಾವತಿ ಶಿಲ್ಕು ಪ್ರತಿಕೂಲವಾಗಿ ಉಳಿದಿರಲು ಕಾರಣವೇನು ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಹತ್ತು** ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಷ್‌ಚಂದ್ರ ಬೋಸರು ಪ್ರಮುಖ ಪಾತ್ರವನ್ನು ವಹಿಸಿದ್ದರು. ವಿವರಿಸಿ.

54. ವಿಶ್ವಸಂಸ್ಥೆಯು ಅನೇಕ ಯುದ್ಧಗಳನ್ನು ಸಮರ್ಥವಾಗಿ ತಡೆಗಟ್ಟಿದೆ. ಇದನ್ನು ಸಮರ್ಥಿಸಿ.

55. ''ಭಾರತವು ಕೃಷಿ ಪ್ರಧಾನ ರಾಷ್ಟ್ರವಾದರೂ ಕೃಷಿಯಲ್ಲಿ ಹಿಂದುಳಿದಿದೆ.'' ಇದಕ್ಕೆ ಕಾರಣಗಳನ್ನು ನೀಡಿ.

VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವ ಪ್ರದೇಶವನ್ನು ಗುರುತಿಸಿ : 1 + 3 = 4

a) ಮನ್ನಾರ್ ಖಾರಿ

b) ವಿಶಾಖಪಟ್ಟಣ

c) ನವಶೇವಾ

***ಸೂಚನೆ :*** ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)

ಹಿಮಾಲಯ ಪರ್ವತದ ಕೆಲವು ಉಪಯೋಗಗಳನ್ನು ತಿಳಿಸಿ. 4